ಅಸಲು ದಾವೆ ಸಂಖ್ಯೆ- 28/2015
ಪಿಡಬ್ಲ್ಯೂ- 01
ದಿನಾಂಕಃ 16.09.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಯು ಕೆ ಕೆ ವಕೀಲರಿಂದ

ಈಗ ನಾನು ನೋಡುತ್ತಿರುವ ಅಸಲು ದಾವೆ ನಂ.136/1996 ರಲ್ಲಿ ಡಿ ಡಬ್ಲ್ಯೂ-1 ಅಂತಾ ಸಾಕ್ಷಿ ಹೇಳಿದ್ದೇನೆ, ಅದರ ನಕಲು ಇರುತ್ತದೆ ಎಂದರೆ ಸರಿಯಲ್ಲ, ಸದರಿ ಸಹಿ ನನ್ನದಲ್ಲ. ಸಾಕ್ಷಿಗೆ ವಕಾಲತ್ತನ್ನು ತೋರಿಸಿ ಅದರ ಮೇಲಿರುವ ಸಹಿ ಗುರುತಿಸಲು ಕೇಳಿದಾಗ ಅದು ತಮ್ಮದೇ ಸಹಿ ಅಂತಾ ಗುರುತಿಸಿರುತ್ತಾರೆ. ಸಾಕ್ಷಿಗೆ ಸದರಿ ಪ್ರಕರಣದ ವಾದಪತ್ರವನ್ನು ತೋರಿಸಿ ಸಹಿ ಯಾರದು ಅಂತಾ ಕೇಳಿದಾಗ ತನ್ನದೇ ಅಂತಾ ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ಅಸಲು ದಾವೆ ನಂ.136/1996 ರ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮತ್ತು ಪಾಟೀ ಸವಾಲಿನ ದೃಡಿಕೃತ ನಕಲು ತೋರಿಸಿ ಸಹಿ ಗುರುತಿಸಲು ಕೇಳಿದಾಗ ಸದರಿ ಸಹಿ ತನ್ನದೇ ಅಂತಾ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಸದರಿ ಸಹಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ಬಂಗಾರಪ್ಪಗೌಡ ಇವರು ಮಾಡಿರುವ ಅಸಲು ದಾವೆ ನಂ.136/1996 ರಲ್ಲಿ ಸದರಿ ದಾವಾ ಆಸ್ತಿಯ ಚಕಬಂದಿ ಏನು ಇತ್ತು ನನಗೆ ಗೊತ್ತಿಲ್ಲ. ಈ ದಾವೆಯ ಆಸ್ತಿಯ ಚಕಬಂದಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ನನ್ನದೇ ಆಸ್ತಿ ಇರುತ್ತದೆ. ವಾದಪತ್ರಕ್ಕೆ ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ . ನನ್ನ ವಾದಪತ್ರದಲ್ಲಿ ದಾವಾ ಆಸ್ತಿಯ ಪೂರ್ವಕ್ಕೆ ವಾದಿ ಮತ್ತು ಪ್ರತಿವಾದಿಯರ ಮನೆಗಳು ಅಂತಾ ಬರೆಸಿದ್ದೇನೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ನನ್ನದೇ ಮನೆ ಇರುತ್ತದೆ. ವಾದಪತ್ರದಲ್ಲಿ ಪಶ್ಚಿಮಕ್ಕೆ ಪ್ರತಿವಾದಿಯರ ಆಸ್ತಿಗಳು ಅಂತಾ ಬರೆಸಿದ್ದೇನೆ ಎಂದರೆ ಸರಿಯಲ್ಲ. ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಪ್ರತಿವಾದಿಯರ ಆಸ್ತಿ ಇರುತ್ತದೆ. ಈ ದಾವಾ ಆಸ್ತಿಯಲ್ಲಿ ನಾನು ತೋರಿಸಿರುವ ಚಕಬಂದಿಯಲ್ಲಿ ತೋರಿಸಿ ಅಸಲು ದಾವೆ ನಂ.136/1996 ರಲ್ಲಿ ದಾವೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಮನೆಯ ಪಶ್ಚಿಮಕ್ಕೆ 10 ಪೂಟು ದಾರಿ ಇರುತ್ತದೆ, ದಾವಾ ಆಸ್ತಿ ಇರುವುದಿಲ್ಲ. ದಾವಾ ಆಸ್ತಿಯು ಪೂರ್ವ ಪಶ್ಚಿಮ 25 ಉತ್ತರ ದಕ್ಷಿಣ 85 ವಿಸ್ತೀರ್ಣ ನನ್ನದೇ ಇರುತ್ತದೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಇರುವ ನನ್ನ ಮನೆಗೆ 170 ಎ ಮತ್ತು 170 ಬಿ ಅಂತಾ ನಂಬರು ಇರುತ್ತದೆ. ನಕಾಶೆ ನನಗೆ ಗೊತ್ತಾಗುವುದಿಲ್ಲ. ಸದರಿ ದಾವಾ ಆಸ್ತಿಗೆ ಮೊದಲು ಪಂಚಾಯತಿಗೆ ನಂಬರು ಇರಲಿಲ್ಲ, ನಂತರ 21 ಸಿ1 ಅಂತಾ ನಂಬರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಸದರಿ 21 ಸಿ1 ದಾವಾ ಆಸ್ತಿ ಇರುತ್ತದೆ, ಅದು ಪ್ರತಿವಾದಿಯರ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಅಸಲು ದಾವೆ ನಂ.136/1996 ರ ಕೈಪಿಯತ್ತ ಜೊತೆ ಕೊಟ್ಟಿರುವ ಕಚ್ಚಾ ನಕಾಶೆಯಲ್ಲಿರುವ ಸಹಿ ವಿರೂಪಾಕ್ಷಗೌಡನ ಸಹಿ ಇರುತ್ತದೆ, ನನ್ನದಲ್ಲ. ನನಗೆ ಈ ದಾವಾದ ಆಸ್ತಿಯನ್ನು ಸದರಿ ಕಚ್ಚಾ ನಕಾಶೆಯಲ್ಲಿ ಗುರುತಿಸಲು ಆಗುವುದಿಲ್ಲ. ಸದರಿ ಅಸಲು ದಾವೆ ನಂ.136/1996 ರಲ್ಲಿರುವ ವಾದಿಯ ನಕಾಶೆಯನ್ನು ತೋರಿಸಲಾಗಿ ಅದು ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ಅಸಲು ದಾವೆ ನಂ.136/1996 ರ ದಾವಾ ಆಸ್ತಿ ಮತ್ತು ಈ ಪ್ರಕರಣದ ದಾವಾ ಆಸ್ತಿ ಒಂದೇ ಅಂತಾ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಪಿಸಿ ನಂ.170 ಬಿ ಇದು ದಾವೆ ಆಸ್ತಿಗೆ ಸಂಬಂಧಪಟ್ಟ ಪಹಣಿ ಅಲ್ಲ ಎಂದರೆ ಸರಿಯಲ್ಲ. ವಿಪಿಸಿ ನಂ.170 ಬಿ ಯಲ್ಲಿ ವೀರಭದ್ರಗೌಡ, ವಿರೂಪಾಕ್ಷಗೌಡ, ಚನ್ನಬಸನಗೌಡ, ಶಂಕರಗೌಡ ಇವರೆಲ್ಲರ ಹೆಸರು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿ ದಾವಾ ಆಸ್ತಿ ನಂ.21 ಸಿ1 ರ ಬಾಜು ಇದ್ದ ಆಸ್ತಿ ಎನ್ನುವುದು ಸರಿಯಲ್ಲ. ದಾವಾ ಆಸ್ತಿ ನಂ.21 ಸಿ1 ಎಂದರೆ ಸರಿಯಲ್ಲ. ಸದರಿ ಆಸ್ತಿ ನಂ.21 ಸಿ1 ರಲ್ಲಿ ವಿರೂಪಾಕ್ಷಗೌಡ, ಚನ್ನಬಸನಗೌಡ, ಶಂಕರಗೌಡ ಮತ್ತು ವೀರಭದ್ರಗೌಡರ ಇವರ ಹಿತಾಸಕ್ತಿ ಇರದೇ ಇರುವುದರಿಂದ ಅವರು ದಾವೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸಬೇಕು ಅಂತಾ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.

Case called out, Plaintiff No.1 and counsel present. MSM files memo with 1 document. Plaintiff No.1 filed affidavit on oath she is examined as PW-1 exp-1 to 4 marked. Fully cross examined. MSM submits no further evidence. Hence side of plaintiff is closed. CSM submits no oral evidence of defendants. Hence side of defendants is closed. For plaintiff arguments on merits . Call on 16-10-2020

CJ and JMFC. Savanur

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.